ಅಧ್ಯಕ್ಷರು : ಈಗ ಶೂನ್ಯ ವೇಳೆ ಮುಗಿಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಆಗಲೇ ಕೆಲವು ಮಾನ್ಯ ಸದಸ್ಯರು ಸರ್ಕಾರ ಸದನದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಗತಿ ಬಗ್ಗೆ ಮಂಡಿಸಿದ ಶ್ವೇತಪತ್ರದ ಕನ್ನಡ ಅನುವಾದದ ಪ್ರತಿಯನ್ನು ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ಅದು ಸಿದ್ಧವಾಗುತ್ತಿದ್ದು 13ನೇ ದಿನಾಂಕದಂದು ಅದನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸಿಕೊಡಲಾಗುವುದು ಎಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಜಾನುವಾರುಗಳು ಸಾಯುತ್ತಿವೆ. ಅದರ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯಬೇಕಾಗಿತ್ತು.

ಅಧ್ಯಕ್ಷರು : ಮಾನ್ಯ ಪಶು ಸಂಗೋಪನಾ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಸ್ವಲ್ಪ ಬ್ಯುಸಿಯಾಗಿದ್ದಾರೆ. ಅವರು ನಾಳೆ ಬರುತ್ತಾರೆ. ನಾಳೆ ಶೂನ್ಯ ವೇಳೆಯಲ್ಲಿ ಇದೇ ವಿಷಯ ತಮಗೆ ಪ್ರಸ್ತಾಪಿಸಲು ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸುಭಾಷ್ ಕಲ್ಲೂರು : ಶೂನ್ಯ ವೇಳೆಯಲ್ಲಿ ನಮ್ಮ ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ವಿಚಾರವೊಂದನ್ನು ಪ್ರಸ್ತಾಪಿಸಬೇಕಾಗಿತ್ತು.

ಅಧ್ಯಕ್ಷರು : ಹೋಂ ಮಿನಿಸ್ಟರ್ ಸದನದಲಿಲ್ಲ. ನಾಳೆ ಅವರನ್ನು ಕರೆಸುತ್ತೇನೆ. ಅವರಿದ್ದಾಗಲೇ ನೀವು ವಿಷಯ ಪ್ರಸ್ತಾಪ ಮಾಡಿದರೆ ನಿಮಗೆ ಸರಿಯಾದ ಉತ್ತರ ಸಿಗುತ್ತದೆ. ಆದ್ದರಿಂದ ನಾಳೆ ಪ್ರಸ್ತಾಪಿಸಿ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಮಾನ್ಯ ಅಧ್ಯಕ್ಷರೇ, ಕಳೆದ 15 ದಿವಸಗಳಿಂದ ಹಾವೇರಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೋರಾಟ ನಡೆಯುತ್ತಿದೆ. ಅದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯೊಂದನ್ನು ಕಳುಹಿಸಿಕೊಟ್ಟಿದ್ದೆ. ಇಲ್ಲಿಯವರೆಗೂ ಅದರ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿಲ್ಲ.

ಅಧ್ಯಕ್ಷರು : ಸುಮಾರು 7-8 ಗಮನ ಸೆಳೆಯುವ ಸೂಚನೆಗಳಿಗೆ ಉತ್ತರ ಬಂದಿದೆ. ದಿನಕ್ಕೆರಡರಂತೆ ಗಮನ ಸೆಳೆಯುವ ಸೂಚನೆಗಳನ್ನು ಅಜೆಂಡಾದಲ್ಲಿ ಸೇರಿಸುತ್ತಿದ್ದೇವೆ. ಈ ಅಧಿವೇಶನ ಮುಗಿಯಲು ಇನ್ನೂ ಸಮಯ ಇದೆ. ಅಷ್ಟರೊಳಗೆ ತಮ್ಮ ಸೂಚನೆ ಬರಬಹುದು. ಅಲ್ಲಿ ಬಹಳ ತೊಂದರೆಯಾಗಿದ್ದರೆ ಅದಕ್ಕೆ ಉತ್ತರ ಬಂದಿದ್ದರೆ ಬೇಕಾದರೆ ನಾಳೆಯೇ ತಮ್ಮ ಗಮನ ಸೆಳೆಯುವ ಸೂಚನೆಯನ್ನು ಅಜೆಂಡಾದಲ್ಲಿ ಸೇರಿಸಿಕೊಳ್ಳೋಣ.

4. ಗಮನ ಸೆಳೆಯುವ ಸೂಚನೆಗಳು

ಅ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭಿವೃದ್ಧಿಗಾಗಿ ಕರ್ನಾಟಕ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸುಮಾರು 350 ಕಿ.ಮೀ ವಿಸ್ತೀರ್ಣವಿದ್ದು ಇದಕ್ಕೆ ತಾಗಿರುವ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಪ್ರತ್ಯೇಕವಾದ ಭೌಗೋಳಿಕ ಮತ್ತು ಪ್ರಾಕೃತಿಕ ಲಕ್ಷಣಗಳು ಹೊಂದಿದೆ. ಕರ್ನಾಟಕ ರಾಜ್ಯದ ಇತರ ಭಾಗಗಳಿಂದ ಎಲ್ಲಾ ದೃಷ್ಟಿಯಲ್ಲೂ ವಿಭಿನ್ನವಾಗಿದ್ದು ಇಲ್ಲಿಯ ಅಭಿವೃದ್ಧಿ ಕಾರ್ಯಗಳು ಮತ್ತು ಪ್ರಾಕೃತಿಕ ವಿಕೋಪಗಳು

ಸರ್ಕಾರದ ವಿಶೇಷ ಗಮನದ ಅವಶ್ಯಕತೆಯಿದ್ದು ಈ ಭಾಗದ ಅಭಿವೃದ್ಧಿಗಾಗಿ ಇತರ ಅಭಿವೃದ್ಧಿ ಮಂಡಳಿಗಳಂತೆ ಕರ್ನಾಟಕ ಕರಾವಳಿ ಅಭಿವೃದ್ಧಿ ಮಂಡಳಿಯೊಂದನ್ನು ಸ್ಥಾಪಿಸುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಬಗ್ಗೆ ಸರ್ಕಾರದ ಮುಂದೆ ಯಾವ ಪ್ರಸ್ತಾವನೆಯೂ ಇರುವುದಿಲ್ಲ. ಈಗಾಗಲೇ ಕರಾವಳಿ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುತ್ತದೆ. ಆದುದರಿಂದ ಪ್ರತ್ಯೇಕವಾಗಿ ಈ ಎರಡು ಜಿಲ್ಲೆಗಳಿಗೆ ಒಂದು ಪ್ರತ್ಯೇಕವಾದ ಮಂಡಳಿಯನ್ನು ರಚಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಅವರನ್ನು ಮಂಡಳಿ ಸ್ಥಾಪಿಸಲು ಕಾನ್‌ವಿನ್ಸ್ ಮಾಡುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿ ಕರ್ನಾಟಕ ರಾಜ್ಯಕ್ಕೆ ಇರುವಂತಹ ಕರಾವಳಿ ಪ್ರದೇಶವೆಂದು ಹೇಳಿದರೆ ಅದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮಾತ್ರ. ವಿಶೇಷವಾಗಿ ಅಲ್ಲಿ ಮಳೆಗಾಲದಲ್ಲಿ ಬರುವಂತಹ ಯಾವುದೇ ನೀರನ್ನು ಶೇಖರಣೆ ಮಾಡಲಿಕ್ಕಾಗುವುದಿಲ್ಲ. ನೇರವಾಗಿ ಆ ನೀರು ಸದಾ ಸಮುದ್ರವನ್ನು ಸೇರುತ್ತದೆ. ಅಲ್ಲಿ ಬೆಳೆಯುವಂತಹ ಬೆಳೆಗಳೂ ಕೂಡ ವಿಶಿಷ್ಟವಾದವು. ಅಲ್ಲಿ ಸಾಮಾನ್ಯವಾಗಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸುವಂತಹ ವ್ಯವಸ್ಥೆಗಳು ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಇರುತ್ತವೆ. ಅಲ್ಲಿಯಂತೆ ಕಡಲಿನ ಮೀನುಗಾರಿಕೆ ಬೇರೆಲ್ಲೂ ಕೂಡ ಮಾಡುವುದಕ್ಕಾಗುವುದಿಲ್ಲ. ಕಡಲ ಕೊರತೆ ಮತ್ತು ಅಲ್ಲಿಯ ಮೀನುಗಾರರ ಸಮಸ್ಯೆ ಮತ್ತು ಮೀನುಗಾರರಿಗೆ ದಿನನಿತ್ಯ ಬರುವಂತಹ ಬವಣೆಗಳು ಅತ್ಯಂತ ನರಕ ಸದೃಸವಾದ ಸಮಸ್ಯೆ. ಬೇರೆ ಬೇರೆ ರೀತಿಯ ಕಾರ್ಖಾನೆಗಳು ಅಲ್ಲಿ ಪ್ರವೇಶವಾಗಿ ಎಲ್ಲ ತ್ಯಾಜ್ಯ ವಸ್ತುಗಳು ಸಮುದ್ಧಕ್ಕೆ ಹೋಗುವ ಕಾರಣ ಸಮುದ್ರದ ಮೀನುಗಳು ನಶಿಸುತ್ತಿರುವ ಸಮಸ್ಯೆ. ಇದನ್ನೆಲ್ಲಾ ನೋಡಿದರೆ ನಮಗೆ ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಹಿಂದನಿಂದ ಸೇರಿಸಿಕೊಂಡಿದ್ದಾರೆ. ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಅಲ್ಲಿ ಕೊಡುವಂತಹ ಕೊಡುಗೆಗಳು ಅದು ಆ ಪ್ರದೇಶದ ಪ್ರಾಕೃತಿಕ ಮತ್ತು ಭೌಗೋಳಿಕ ವಿಚಾರಕ್ಕೆ ಅನುಗುಣವಾಗಿರುತ್ತದೆ. ಮೀನುಗಾರಿಕೆ, ತೋಟಗಾರಿಕೆ ಬೆಳೆಗಳು ಬಾಕಿ ಎಲ್ಲವನ್ನು ಮನಗಂಡರೆ ಬಹುಶಃ ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿಶೇಷವಾದ ಒತ್ತನ್ನು ಕೊಡುವಂಥದ್ದು ಮತ್ತು ಈ ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ನಾವು ಏನು ಚರ್ಚೆ ಮಾಡಿದರೂ ಕೂಡ ಆ ಭಾಗದ ಜನತೆಗೆ ಭಾರಿ ಮಹತ್ವ ಸಿಗುತ್ತಿಲ್ಲವೆಂಗು ಹೇಳುವಂತಹ ಹಿನ್ನೆಲೆಯಲ್ಲಿ ಕೂಡ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ವಿಶೇಷವಾಗಿ ಈ ಭಾಗಕ್ಕೂ ತಾವು ಅಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಿದರೆ, ಅಲ್ಲಿ ಕೂಲಂಕಷವಾಗಿ ಆ ಭಾಗದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ಈಗಾಗಲೇ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಈ ಭಾಗ ಸೇರಿಕೊಂಡಿರುವುದರಿಂದ ಮತ್ತು ಪ್ರತ್ಯೇಕವಾದ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವಂತಹ ಅಗತ್ಯವಿಲ್ಲವೆಂದು ಹೇಳಾದ್ದರೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ

ನಮ್ಮ ಸವಿನಯ ವಿನಂತಿ, ಕರಾವಳಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳು ಒಳಗೊಂಡಂತೆ, ಈ ಮೂರು ಜಿಲ್ಲೆಗಳು ಮಳೆಗಾಲದಲ್ಲಿ 100 ರಿಂದ 120 ಸೆಂಟಿ ಮೀಟರ್ ಗಿಂತ ಹೆಚ್ಚು ಮಳೆ ಆಗುತ್ತದೆ. ಆದರೆ ಬೇಸಿಗೆ ಬಂದರೆ ಕುಡಿಯುವ ನೀರಿಗೆ ಹಾಹಾಕಾರ ಇದೆ. ರಸ್ತೆಗಳು ಮಳೆ ಅತಿಯಾಗಿ ಬಂದರೆ, ಯಾರು ರೋಡ್ ಮಾಡಿದರೂ ಅದು ಪಿಡಿಬ್ಲ್ಯುಡಿಯವರು ಮಾಡಲಿ ಜಿಲ್ಲಾಪರಿಷತ್ತಿನವರು ಮಾಡಲಿ, ಇನ್ನು ಯಾರೇ ಮಾಡಲಿ ಮಳೆಗಾಲದಲ್ಲಿ ಅದಕ್ಕೆ ವಿಶೇಷವಾದ ನಿರ್ವಹಣೆ ಆಗದೆ ರಸ್ತೆಗಳೆಲ್ಲವೂ ಹಾಳಾಗಿ ಹೋಗಿದೆ. ಮಲೆನಾಡಿನಲ್ಲಿ ಹಾಳಾಗುವಷ್ಟು ರಸ್ತೆಗಳು ಉಳಿದ ಕಡೆಗಳಲ್ಲಿ ಹಾಳಾಗುತ್ತಿಲ್ಲ. ಇದನ್ನು ನಾವು ನೋಡುತ್ತಿದ್ದೇವೆ. ಹೀಗೆ ಪ್ರತಿಯೊಂದು ಅಭಿವೃದ್ಧಿ ವಿಭಾಗವನ್ನು ತೆಗೆದುಕೊಂಡು ನೋಡಿದರೂ ಅದರದೇ ಆದ ಅನೇಕ ವಿಶೇಷತೆಗಳನ್ನು ನಾವು ಕಾಣುತ್ತೇವೆ. ಅಭಿವೃದ್ಧಿ ಮಂಡಳಿ ಆಗಬೇಕೆಂದು ಕೇಳುವುದಕ್ಕೆ ಈ ಎರಡೂ ಜಿಲ್ಲೆಗಳಿಗೂ ವಿಶೇಷವಾದ ಅರ್ಹತೆ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಉದಾಹರಣೆಗೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾವಿರ ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ರಾಜ್ಯಕ್ಕೆ ಕೊಡುತ್ತಿದ್ದೇವೆ. 15ನೇ ತಾರೀಖು ಕಡ್ರಾ ಕೊಡಸಳ್ಳಿ ಉದ್ಘಾಟನೆ ಮಾಡುತ್ತೀರಿ ಇನ್ನಷ್ಟು ಜಾಸ್ತಿಯಾಗುತ್ತದೆ. ಅರಣ್ಯದಿಂದ ಸುಮಾರು 100 ಕೋಟಿ ರೂಪಾಯಿಯಷ್ಟು ಆದಾಯ ನಾವು ರಾಜ್ಯಕ್ಕೆ ಕೊಡುತ್ತಿದ್ದೇವೆ. ಆದರೆ ನಮ್ಮ ಊರುಗಳಲ್ಲಿ ಕರೆಂಟ್ ಇಲ್ಲ, ನಮ್ಮ ಊರುಗಳಲ್ಲಿ ರಸ್ತೆ ಸರಿಯಾಗಿಲ್ಲ, ಈ ರೀತಿಯಾದ ಸೌಲಭ್ಯದಿಂದ ನಾವು ವಂಚಿತರಾಗುತ್ತಿದ್ದೇವೆ. ಏಕೆ ಈ ಅಭಿವೃದ್ಧಿ ಮಂಡಳಿ ಆಗಬೇಕೆಂದು ಹೇಳುತ್ತಿದ್ದೇವೆ ಎಂದರೆ, ಕನಿಷ್ಠ ನಾಗರೀಕ ಸೌಲಭ್ಯದಿಂದ ವಂಚಿತರಾಗುವ ಪರಿಸ್ಥಿತಿ ಇದೆ. ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಸೇರಿದರೂ ಆ ಮಂಡಳಿ ಕತೆಯೇ ಬೇರೆ ಇದೆ. 1998-99ನೇ ಸಾಲಿನ ಹಣವೇ ಬರಲಿಲ್ಲ, ಈ ರೀತಿ ವಿಶೇಷವಾದ ಗಮನವನ್ನು ಕರಾವಳಿ ಜಿಲ್ಲೆಗೆ ಸರ್ಕಾರ ನೀಡಿದಾಗ ಅಲ್ಲಿ ಮೀನುಗಾರರ ದೃಷ್ಟಿಯಿಂದ ಮತ್ತು ಕೃಷಿ ಕಾರ್ಮಿಕರ ದೃಷ್ಟಿಯಿಂದ ಅಲ್ಲಿಯ ಜನತೆಗೆ ನೆಮ್ಮದಿ ಸಿಗುವ ಚರ್ಚೆಯಾಗಿ ಸರ್ಕಾರದ ಯೋಜನೆಗಳನ್ನು ಸಿದ್ಧಪಡಿಸುವುದಕ್ಕೆ ನಮಗೆ ಸಾಧ್ಯವಿದೆ. ನಾವು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಮುಖ್ಯಮಂತ್ರಿಗಳು ಇದನ್ನು ಪುನರ್ ಪರಿಶೀಲನೆ ಮಾಡಲಿ, ಸರಾಸಗಟಾಗಿ ಮಂಡಳಿಯನ್ನು ರಚನೆ ಮಾಡುವ ಅಗತ್ಯವಿಲ್ಲ ಎನ್ನುವ ನಿರ್ಧಾರಕ್ಕೆ ಬರದೆ ಇದನ್ನು ಪರಿಶೀಲನೆ ಮಾಡಲಿ, ನಮ್ಮ ಭಾವನೆಗಳನ್ನು ಅಥೈಸಿಕೊಳ್ಳಲಿ, ಕರಾವಳಿ ಭಾಗದ ಶಾಸಕರನ್ನು ಕರೆದು ಒಂದು ಸಭೆ ಮಾಡಿ ಕಷ್ಟ ಸುಖಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಚರ್ಚಿಸಿ ಇದನ್ನು ಪರಿಶೀಲಿಸಿ ಮಂಡಳಿ ರಚನೆ ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ನಮ್ಮ ಕರಾವಳಿಯ ಜಿಲ್ಲೆಗಳನ್ನು ಗೋವಾದ ಹಾಗೆ ಪ್ರವಾಸೋದ್ಯಮ ಕೇಂದ್ರವಾಗಿ ಬೆಳವಣಿಗೆ ಮಾಡಬೇಕೆಂದು ನಾನು ಇಚ್ಛೆ. ಅದೇ ರೀತಿ ಮತ್ಸೋದ್ಯಮಕ್ಕೆ ಸಂಬಂಧಪಟ್ಟ ಹಾಗೆ, ತೋಟಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಅಲ್ಲಿ ಬೆಳೆಸಬೇಕು. ಇದೆಲ್ಲಾ ಬರಬೇಕಾದರೆ ಮೂಲಭೂತ ಸ್ಟ್ರಕ್ಚರ್ ಏನಿದೆ, ರಸ್ತೆಗೆ ಸಂಬಂಧಪಟ್ಟ ಹಾಗೆ ಇರಬಹುದು, ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಇರಬಹುದು, ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಕೇವಲ ಮಂಗಳೂರು ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ರಸ್ತೆ ಅಭಿವೃದ್ಧಿಗೆ 411 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇಷ್ಟು ವರ್ಷಗಳಿಂದ ಅಭಿವೃದ್ಧಿ ಮಾಡುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಈ ನಾಲ್ಕು ಪಾಯಿಂಟ್‌ಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟು ಅದನ್ನು ಬೆಳವಣಿಗೆ ಮಾಡಬೇಕು. ಇಲ್ಲಿ ಅನೇಕ ಬೃಹತ್

ಉದ್ದಿಮೆಗಳು ಬರುವಂತಹ ಸಂದರ್ಭದಲ್ಲಿ ಆಗುವಂತಹ ತೊಂದರೆಗಳು ಆಗದ ರೀತಿಯಲ್ಲಿ ಅದಕ್ಕೆ ಬೇಕಾದ ಎಲ್ಲ ಕಟ್ಟಿಚ್ಚರಿಕೆಯನ್ನು ವಹಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಕರಾವಳಿ ಮೂರು ಜಿಲ್ಲೆಗಳು ಸೇರಿ ಒಂದು ವಿಶೇಷ ಅಭಿವೃದ್ಧಿ ಮಂಡಳಿ ಮಾಡಿ ರಾಜ್ಯಕ್ಕೆ ಹೆಚ್ಚು ಆದಾಯವನ್ನು ಕೊಡುವ ಜಿಲ್ಲೆಗಳು ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಈ ಅಭಿವೃದ್ಧಿ ಮಂಡಳಿಯನ್ನು ಆರಂಭ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಕರಾವಳಿ ಪ್ರದೇಶದಲ್ಲಿ ಅಭಿವೃದ್ಧಿ ಮಂಡಳಿಯನ್ನು ರಚಿಸತಕ್ಕಂಥದ್ದರ ಬಗ್ಗೆ ಹಲವಾರು ಪೂರಕವಾದ ವಾದಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನೀವು ನಮ್ಮ ರಾಜ್ಯದ ಬೊಕ್ಕಸಕ್ಕೆ ನಿಮ್ಮ ಭಾಗದಿಂದ ಬರತಕ್ಕಂತಹ ತೆರಿಗೆ ರೂಪದಲ್ಲಿ ರೆವಿನ್ಯೂ ಆದರ ಬಗ್ಗೆ ನಮಗೆ ವಿಶೇಷವಾದ ಅಭಿಮಾನ ಇದೆ. ಹಾಗೆ ನಿಮ್ಮ ಭಾಗದಲ್ಲಿ ಉತ್ಪತ್ತಿಯಾಗತಕ್ಕಂತಹ ವಿದ್ಯುತ್, ಆ ವಿದ್ಯುತ್ತಿನಿಂದ ಲಕ್ಷಾಂತರ ಕುಟುಂಬಗಳು ಆಶ್ರಯ ಮಾಡಿ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇದೆಲ್ಲವೂ ಸರಿ. ಆದರೆ ಒಂದು ಮಂಡಳಿಯನ್ನು ವಿಶೇಷವಾಗಿ ಈ ಎರಡು ಜಿಲ್ಲೆಗಳಿಗೋಸ್ಕರ ಮಾಡತಕ್ಕಂತಹ ಪ್ರತಿಪಾದನೆ ಇದೆ, ಆ ಪ್ರತಿಪಾದನೆಯಲ್ಲಿ ಆದರಿಂದ ಉಪಯೋಗವಾಗತಕ್ಕಂಥದ್ದು ನಮಗೆ ಕಂಡುಬಂದರೆ ನಾವು ಹಿಂದು ಮುಂದು ನೋಡದೆ ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಯಾವುದೇ ಮಂಡಳಿ ರಚನೆ ಮಾಡಿದರೆ ಅದಕ್ಕೆ ಶಕ್ತಿ ತುಂಬುವುದು ನಾವು ಎಷ್ಟು ಸಂಪನ್ಮೂಲಗಳನ್ನು ಅದಕ್ಕೆ ಒದಗಿಸಿಕೊಡುತ್ತೇವೆ ಎನ್ನತಕ್ಕಂಥದ್ದೇ ಅಳತೆಗೋಲು. ಆ ಅಳತೆಗೋಲನ್ನು ನಾವು ಆಧಾರವಾಗಿಟ್ಟುಕೊಂಡು ವಿಚಾರವನ್ನು ಯೋಚನೆ ಮಾಡತಕ್ಕಂತಹ ಕಾಲದಲ್ಲಿ ರಾಜ್ಯದ ಸಂಪನ್ಮೂಲಗಳು ಎಷ್ಟು ಕಠಿಣವಾಗಿದೆ ಎಂದು ತಮಗೆ ಗೊತ್ತು. ಅವಶ್ಯಕವಾಗಿ ಮಾಡದೇ ಬೇಕಾದ ವೆಚ್ಚಗಳಿಗೂ ಕೂಡ ನಾವು ಹತ್ತು ಹಲವಾರು ನಿಯಂತ್ರಣಗಳನ್ನು ಹಾಕಿಕೊಂಡು ಬಂದಿದ್ದೇವೆ. ಇದರ ಜೊತೆಗೆ ಒಂದು ಹೈಲೆವೆಲ್ ಅಫೆಕ್ಸ್ ಸಮಿತಿಯನ್ನು ಕೂಡ ಈಗಾಗಲೇ ನಾವು ಡಾ: ಅಲಗ್ ರವರ ನೇತೃತ್ವದಲ್ಲಿ ರೀಜನರಲ್ ಇಂಬ್ಯಾಲೆನ್ಸ್ ಬಗ್ಗೆ ಸಮಗ್ರವಾದ ಒಂದು ವರದಿ ಕೊಡುವುದುಕ್ಕೆ, ಆದು ರೀಜನಲ್ ಇಂಬ್ಯಾಲೆನ್ಸ್ ಆಗಿ ಅಥವಾ ಹೇಗೆ ಪ್ರತಿಯೊಂದು ರೀಜನ್ ಡೆವಲಪ್ ಮಾಡುವುದಕ್ಕೆ ಏನೇನು ಕ್ರಮವನ್ನು ರಾಜ್ಯ ಸರ್ಕಾರ ಹಮ್ಮಿಕೊಳ್ಳ ಬಹುದು ಎನ್ನುವುದರ ಬಗ್ಗೆ ಆ ಸಮಿತಿ ಶಿಫಾರಸ್ಸುಗಳನ್ನು ಮಾಡತಕ್ಕಂಥದ್ದು ಇದೆ. ಆದ್ದರಿಂದ ನಾವು ಈ ದಿಸೆಯಲ್ಲಿ ಮುಂದೆ ಹೋಗುವ ಮುನ್ನ ಆ ಸಮಿತಿಯವರು ಮಾಡತಕ್ಕಂತಹ ವರದಿಗೆ ಅನಂತರ ತಾವು ಮಂಡಿಸಿದ ವರದಿಗೆ ನಾನು ಸ್ಪಂದಿಸುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

ಆ) ಮುನಿಸಿಪಲ್ ಬಾಂಡ್ ಯೋಜನೆಯಡಿ ಬೆಂಗಳೂರಿನ ರಸ್ತೆ ಕಾಮಗಾರಿಗಳಲ್ಲಿ ಆಗಿರುವ ಅವ್ಯವಹಾರ

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮತ್ತು ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಮುನಿಸಿಪಲ್ ಬಾಂಡ್ ಯೋಡನೆಯಡಿ ಬೆಂಗಳೂರಿನ ರಸ್ತೆ ಕಾಮಗಾರಿಗಳಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇವೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು) : ಬೆಂಗಳೂರು ಮಹಾನಗರ ಪಾಲಿಕೆಯು ನಗರದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು (ಅಂದರೆ ನಗರದ ರಸ್ತೆಗಳನ್ನು ಅಗಲಗೊಳಿಸುವುದು, ಉತ್ತಮ ಪಡಿಸುವುದು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ತಾಂತ್ರಿಕವಾಗಿ ಬಲಪಡಿಸುವುದು ಮತ್ತು ಪಾದಚಾರಿ